

## ಬದಲಾಗಬೇಕು ಸಂಪ್ರದಾಯ

ಅಪ್ಪ ಹಾಕಿದ ಆಲದ ಮರಕ್ಕೆ ನೇತು ಹಾಕಿಕೊಂಡು ಶಾಸ್ತ್ರ, ಸಂಪ್ರದಾಯ ಎಂದು ಅಬ್ಬರಿಸುತ್ತಾ ಅದರ ಚೌಕಟ್ಟಿನಲ್ಲಿ ಕಿರಿಯರಿಗೆ ಕಿರುಕುಳ ನೀಡುತ್ತಿರುವ ಹಿರಿಯರಿಗೆ ಸೂಕ್ಷ್ಮವಾಗಿ ಆಪದ್ಧರ್ಮದ ಬಗ್ಗೆ ನವಿರಾಗಿ ಹೇಳುವ 'ಕನ್ನಡತಿ'ಯ ಪ್ರಯತ್ನ ಮೆಚ್ಚುಗೆಗೆ ಪಾತ್ರವಾಗಿದೆ. ಪತಿ ಸಾಯುತ್ತಲೆ ಪತ್ನಿಯ ಕೇಶಮುಂಡನ ಮಾಡಿಸಿ, ಕೆಂಪು ಸೀರೆ ಉಡಿಸಿ, ಮಂಗಳ ಕಾರ್ಯಗಳಿಗೆ ಅನರ್ಹಳೆಂದು ಮೂಲೆಯಲ್ಲಿ ಕುಳ್ಳಿರಿಸುವ ಈ ಪುರುಷ ಪ್ರಧಾನ ಸಮಾಜದ ಪರಿವರ್ತನೆಯು ಇಂಥ ಕೆಚ್ಚೆದೆಯವರಿಂದಲೇ ಆಗಬೇಕಾಗಿದೆ. ಗಂಡು ಮಕ್ಕಳಿಲ್ಲದ ತಂದೆಯ ಅಂತ್ಯ ಸಂಸ್ಕಾರಕ್ಕೆ ಮುಂದಾದ ಭುವಿ ಕೇಶ ಮುಂಡನಕ್ಕೂ ಸಿದ್ಧಳಾಗುತ್ತಾಳೆ. ಹೆತ್ತವರಿಗೆ ಇಬ್ಬರೂ ಒಂದೇ. ಬೇರೆ ಯಾರೋ ಮಾಡುವುದಕ್ಕಿಂತ ತಾನೇ ಮಾಡುತ್ತೇನೆ ಎಂದು ಎಲ್ಲರನ್ನೂ ಎದುರಿಸಿ ನಿಲ್ಲುವ ಅವಳ ದಿಟ್ಟತನ ನಿಜಕ್ಕೂ ಶ್ಲಾಘನೀಯ.

—ಪುಷ್ಪಾ ಎನ್.ಕೆ. ರಾವ್, ಉಡುಪಿ

**ಉತ್ತಮ ವಿಚಾರ:** ಕನ್ನಡತಿ ಧಾರಾವಾಹಿಯಲ್ಲಿ ಒಳ್ಳೆಯ ವಿಚಾರಗಳನ್ನು ಹೇಳುವ ಪ್ರಯತ್ನ ಮಾಡಿದ್ದಾರೆ. ಕಣ್ಣಿನ ಪರೀಕ್ಷೆ ಮಾಡುವಾಗ ದೃಷ್ಟಿ ನೋಡಲು ಇಂಗ್ಲಿಷ್ ಬಾರದವರಿಗೆ ಕನ್ನಡ ಅಕ್ಷರಗಳ ಅಗತ್ಯವಿದೆ. ಮಗಳಿಗೂ ತಂದೆಯ ಅಂತ್ಯಕ್ರಿಯೆ ಮಾಡುವ ಅವಕಾಶ ನೀಡಬೇಕು ಎಂದು ಪ್ರತಿಪಾದಿಸುವ ಗುಣಮಟ್ಟದ ಧಾರಾವಾಹಿ.

—ಶೋಭಾ ಕುಮಾರಸ್ವಾಮಿ

**ಭೇಷ್ 'ಕನ್ನಡತಿ':** ಪ್ರತಿ ಸಂಚಿಕೆಯಲ್ಲಿಯೂ ಕಲರ್ಸ್ ಕನ್ನಡದ 'ಕನ್ನಡತಿ' ವಿಶೇಷ ಅನ್ನಿಸುತ್ತದೆ. ನಾಯಕಿಯ ತಂದೆ ತೀರಿಕೊಂಡ ಸಂದರ್ಭದಲ್ಲಿ ಪುತ್ರ ಹಾಗೂ ಅಳಿಯನಿಲ್ಲದ ಕಾರಣ ಮಗಳೇ ತಂದೆಯ ಚಿತೆಗೆ ಅಗ್ನಿ ಸ್ಪರ್ಶ ಮಾಡುವ ಮೂಲಕ ಮಹಿಳಾ ಸಮಾನತೆಯನ್ನು ಸಾರಿರುವುದು ಪ್ರಶಂಸನೀಯ. ಇಂದು ಗಂಡು ಸಂತಾನವಿಲ್ಲದ ಎಷ್ಟೋ ಕುಟುಂಬಗಳಿಗೆ ಮಾದರಿಯಾಗಿದೆ.

—ಆಕಸ್ಮಿತ, ಬೆಂಗಳೂರು

**ಕಾಯಿಗೆ ಜುಟ್ಟಿಲ್ಲ:** 'ಕನ್ನಡತಿ'ಯಲ್ಲಿ ಈ ಹಿಂದೆ ಭುವಿ ಚೌಡೇಶ್ವರಿ ದೇವಸ್ಥಾನಕ್ಕೆ ಹೂವು, ಹಣ್ಣು, ತೆಂಗಿನಕಾಯಿ (ಜುಟ್ಟಿಲ್ಲದ್ದು) ಪೂಜೆಗೆ ಇಟ್ಟಿದ್ದಳು. ಅರ್ಚಕರು ಕಾಯಿ ಯಾರದ್ದೆಂದು ಕೇಳಿ ಒಡೆದಾಗ ತೊಟ್ಟಿಲಕಾಯಿ ಒಡೆಯಿತೆಂದು ಪ್ರಶಂಶಿಸಿದರು. ಪೂಜೆಗೆ ಜುಟ್ಟಿನಕಾಯಿ ಒಡೆಯುವುದು ಪದ್ಧತಿ ಅಲ್ಲವೆ?

—ಸೀತಾ ಕೇಶವ ಸಿಡ್ನಿ

ವಾರದ ಪತ್ರ

## ಮಹಿಳೆಯರೂ ಸಮಾನರು

ಕಲರ್ಸ್ ಕನ್ನಡದ 'ಕನ್ನಡತಿ' ವಿಶೇಷ ಕಥೆ, ಸಂಭಾಷಣೆ ಮೂಲಕ ವೀಕ್ಷಕರ ಮನ ಗೆಲ್ಲುತ್ತಿದೆ.

ಈಚೆಗೆ ಭುವಿ (ಭುವನೇಶ್ವರಿ) ತನ್ನೂರು ಹಸಿರುಪೇಟೆ ಹೋಗುವ ಸಂಭ್ರಮದಲ್ಲಿದ್ದಾಗ... ಅವಳ ತಂದೆ ದೈವಾಧೀನರಾದ ವಿಷಯ ಊರು ಮುಟ್ಟಿದ ನಂತರವಷ್ಟೇ ತಿಳಿದು ಜರ್ಜರಿತಳಾಗುತ್ತಾಳೆ. ಸಾಮಾನ್ಯವಾಗಿ ಶಾಸ್ತ್ರ– ಸಂಪ್ರದಾಯಗಳ ಪಾಲನೆಯಲ್ಲಿ ಗಂಡು ಮಕ್ಕಳು ಶ್ರೇಷ್ಠ ಎಂಬುದನ್ನು ಪ್ರತಿಬಿಂಬಿಸಲಾಗುತ್ತದೆ. ತನ್ನ ಹೆತ್ತವರಿಗೆ ಗಂಡು ಸಂತಾನ ಇಲ್ಲ. ಆಚಾರ ವಿಚಾರಗಳಲ್ಲಿ ಹೆಣ್ಣು ಮಕ್ಕಳೂ ಸರಿಸಮಾನರು ಎಂದು ಪ್ರತಿಪಾದಿಸುತ್ತಾ ತನ್ನ ತಂದೆಯ ಅಂತಿಮ ಸಂಸ್ಕಾರವನ್ನು ತಾನೇಕೆ ಮಾಡಬಾರದು ಎಂದು ಗೊಡ್ಡು ಸಂಪ್ರದಾಯದ ಬಗೆಗೆ ಅಡೆ ಒಡ್ಡುವ ಎಲ್ಲರನ್ನು ತನ್ನ ಮಾತಿನ ಮೋಡಿಯಿಂದ ತನ್ನ ಜನಕನ ಅಂತ್ಯಕ್ರಿಯೆಯನ್ನು ಹೆಣ್ಣಾದ ತಾನೂ ಮಾಡುವುದು ಆಪತ್ಧರ್ಮದ ನಿಯಮದಲ್ಲಿ ಧರ್ಮ ವಿರೋಧವಲ್ಲ ಎಂದು ಮನೋಜ್ಞವಾಗಿ ಅಭಿನಯಿಸಿದ್ದಲ್ಲದೇ... ಬದಲಾವಣೆ ಜಗದ ನಿಯಮ ಎಂದು ಹೆಣ್ಣು–ಗಂಡು ಮಕ್ಕಳಷ್ಟೇ ಸರಿಸಮಾನರು ಎಂದು ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸಿದ್ದಾರೆ. ಭುವಿಯ ನಿಲುವನ್ನು ಹರ್ಷ ಸಹ ಬೆಂಬಲ ನೀಡಿದ್ದು, ಜಗ್ಗಣ್ಣ ಹಾಗೂ ಅಂತ್ಯಕ್ರಿಯೆಗೆ ಬಂದ ಗ್ರಾಮಸ್ಥರು ದೈವಾಧೀನರಾದ ನಂಜುಂಡನ ಮಗಳು ಹೆಣ್ಣು ಮಗಳಾದರೇನು.... ಕುಟುಂಬದ ಹೊಣೆ ಹೊತ್ತ ಭುವಿ ಗಂಡು ಮಗುವಿಗಿಂತ ಕಡಿಮೆ ಅಲ್ಲ ಎಂದು ತೋರಿಸಿದ್ದಾರೆ.

—ರಘುನಾಥರಾವ್ ತಾಪ್ಸೆ, ದಾವಣಗೆರೆ

## ಮೆಚ್ಚುಗೆಯ ಮಹಾನಾಯಕ

ಝೀ ವಾಹಿನಿಯ 'ಮಹಾನಾಯಕ' ನಮ್ಮ ನಮ್ಮ ಅಚ್ಚುಮೆಚ್ಚಿನ ಧಾರಾವಾಹಿ. ಅದರಲ್ಲಿ ನಟಿಸಿರುವ ಮುಖ್ಯ ಪಾತ್ರಧಾರಿಗಳಾದ ಭೀಮ್‌ರಾವ್, ಅಂಬೇಡ್ಕರ್ ಗುರುಗಳು, ಭೀಮಾಬಾಯಿ, ಧ್ರುವ, ರಾಮ್‌ಜಿ ಸತ್ಪಾಲ್, ಚಿದಾನಂದ ಆಚಾರ್ ಮತ್ತು ಇನ್ನೂ ಕೆಲವು ಮುಖ್ಯ ಪಾತ್ರಧಾರಿಗಳ ನಿಜ ಜೀವನದ ಬಗ್ಗೆ ತಿಳಿದುಕೊಳ್ಳಬೇಕೆಂದು ಕೆಲವು ವೀಕ್ಷಕರಿಗೆ ಕುತೂಹಲ ಇರುತ್ತದೆ.

'ಸುಧಾ'ದಲ್ಲಿ ಕನ್ನಡ ನಟರ ಪರಿಚಯವನ್ನು ಪ್ರತಿಸ್ಪಂದನ ವಿಭಾಗದಲ್ಲಿ ಪರಿಚಯಿಸುವ ಹಾಗೆ ಮಹಾನಾಯಕದ ಮುಖ್ಯ ಪಾತ್ರದಾರಿಗಳ ಮತ್ತು ಅವರಿಗೆ ಕನ್ನಡದಲ್ಲಿ ಧ್ವನಿ ನೀಡುತ್ತಿರುವವರ ಕಿರು ಪರಿಚಯವನ್ನು ಇಬ್ಬರ ಭಾವಚಿತ್ರದೊಂದಿಗೆ ಮಾಡಿಕೊಡಿ.

—ಎನ್. ವೈದೇಹಿ, ಮೈಸೂರು

## ಸದಭಿರುಚಿ ಇರಲಿ

ಕಲರ್ಸ್ ಕನ್ನಡದ 'ಮಂಗಳಗೌರಿ ಮದುವೆ' ಎಂಬ ಅರ್ಥಹೀನ ಧಾರಾವಾಹಿ ಯಾರಿಗೆ ಇಷ್ಟವೋ ದೇವರೇ ಬಲ್ಲ?

ಇದರ ಕಲರ್ಸ್ ಸೂಪರ್‌ನಲ್ಲಿ ಪ್ರಸಾರವಾಗುತ್ತಿದ್ದ ಉತ್ತಮ ಕಥಾ ಹಂದರದ 'ಮಗಳು ಜಾನಕಿ'ಗೆ ಅವಕಾಶ ನೀಡಿದ್ದರೆ ಚೆನ್ನಾಗಿರುತ್ತಿತ್ತು. ಸದಭಿರುಚಿಯ ಧಾರಾವಾಹಿಗಳಿಗೆ ಅವಕಾಶ ನೀಡಿ.

—ಸುಮಾ ಗುರುರಾಜ್, ಬೆಂಗಳೂರು

## ನಿಯಮಗಳಿರಲಿ

ಧಾರಾವಾಹಿ ಅಥವಾ ಸಿನಿಮಾ ಮಾಡುವವರು ಕಡ್ಡಾಯವಾಗಿ ಕೆಲವು ನಿಯಮಗಳನ್ನು ಪಾಲಿಸಿದರೆ ತುಂಬಾ ಅನುಕೂಲ ಎಂದು ಅನಿಸುತ್ತದೆ.

ಧೂಮಪಾನ ಮತ್ತು ಮದ್ಯಪಾನ ರಹಿತ ದೃಶ್ಯಗಳು, ದ್ವಂದ್ವಾರ್ಥ ಇಲ್ಲದ ಸಂಭಾಷಣೆ, ಯಾವುದೇ ಜಾತಿ, ಉದ್ಯೋಗ, ಇಲಾಖೆಗಳ ಬಗ್ಗೆ ಗೌರವ ಮೂಡಿಸುವುದು, ಸಭ್ಯ ಬಟ್ಟೆ ಧರಿಸುವುದು, ವ್ಯಂಗ್ಯವಾಗಿ ನಿಂದಿಸದೇ ಇರುವುದು, ಹಿಂಸೆ, ಕ್ರೌರ್ಯ ರಹಿತ ದೃಶ್ಯಗಳು ಇದ್ದರೆ ಚೆಂದ.

—ಬೀ.ಕೆ. ಅನ್ನಪೂರ್ಣಾ ದೇವಿ, ಕ್ಯಾತ್ಸಂದ್ರ

## ವಾಕರಿಕೆ ಹೇಸಿಗೆ ಜಿಗುಪ್ಸೆ?

ಕನ್ನಡ ಕಲರ್ಸ್‌ನಲ್ಲಿ ಪ್ರಸಾರವಾಗುತ್ತಿರುವ 'ಹೂ ಮಳೆ' ಕೇವಲ ಅಧಿಕಾರಕ್ಕೆ ಉನ್ನತ ಶಿಕ್ಷಣದ ಐಎಎಸ್ ಅಧಿಕಾರಿಯನ್ನು ಬರ್ಬರ ಹತ್ಯೆ ಮಾಡಲು ಹೊರಟಿರುವ ನಟಿ ಸುಜಾತಾ (ರೇಡಿಯೊ ಜಾಕಿ) ನಿಜಕ್ಕೂ ಅವಳ ವಿಕೃತ ಮನವನ್ನು ತೋರಿಸುತ್ತದೆ. ರಾಧಾರಮಣದಲ್ಲಿ ಮಗಳ ಜೊತೆ ಆಡಬಾರದ ಆಟ ಆಡಿ ಕೆಡೆಗೆ ಯಾರ ಕೈಗೂ ಸಿಗದೆ ಅವಳ ಶ್ರೀಮಂತಿಕೆಯನ್ನು ತೋರಿಸುವುದರ ಉದ್ದೇಶವೇನು ಜೀವನದಲ್ಲಿ ಒಂದು ಒಳ್ಳೆಯ ಯಾವುದಾದರೂ ಪಾತ್ರ ಮಾಡಿ ಜನರ ವಿಶ್ವಾಸಗಳಿಸಲಿ ಎನ್ನುವ ಆಶಯ.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು